ದಿ.23.10.2019. O S 76/2011 DW-1

ದಿ.23.10.2019 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಡಿ ಎನ್ ಎನ್ ವಕೀಲರಿಂದಃ-**

ನಾನು ಬಿ ಕಾಂ ವಿದ್ಯಾಬ್ಯಾಸ ಮಾಡಿರುತ್ತೇನೆ. ನನ್ನ ಸಾಕ್ಯ ವನ್ನು ನನ್ನ ಪರವಾಗಿ, ಪ್ರತಿವಾದಿ 5 ರ ಪರವಾಗಿ ಕೂಡ ನೀಡುತ್ತಿದ್ದೇನೆ. ನನ್ನ ತಾತನ ಹೆಸರು ಅಂಕೇಗೌಡ ಆಗಿರುತ್ತದೆ. ನನ್ನ ತಾತನ ಅಂಕೇಗೌಡರಿಗೆ ನಾಲ್ಕು ಜನ ಮಕ್ಕಳಿದ್ದು ಅವರು ಎಮ್ ಚನ್ನೇಗೌಡ, ಎಮ್ ಹೆಳವೇಗೌಡ, ಮರಿಅಂಕೇಗೌಡ, ಮಾದೇಗೌಡ ಆಗಿರುತ್ತಾರೆ. ಎಮ್ ಚನ್ನೇಗೌಡ ನನ್ನ ತಂದೆ ಎಂದರೆ ಸರಿ. ಅಂಕೇಗೌಡರಿಗೆ ನನ್ನ ತಂದೆ ಹಿರಿ ಮಗ ಎಂದರೆ ಸರಿ. ನನ್ನ ತಂದೆಯೇ ಒಟ್ಟು ಕುಟುಂಬ ಜವಾಬ್ದಾರಿ ವಹಿಸಿಕೊಂಡಿದ್ದರು ಎಂದರೆ ಸರಿ.

ನಮ್ಮತಾತ ತೀರಿಕೊಂಡ ನಂತರ ಒಟ್ಟು ಕುಟುಂಬದ ಆಸ್ತಿಗಳು ನನ್ನ ತಂದೆಯ ಹಸೆರಿನಲ್ಲಿ ಇದ್ದವು ಎಂದರರೆ ಸರಿಯಲ್ಲ. ನನ್ನ ತಾತ ತೀರಿಕೊಂಡ ನಂತರ ಒಟ್ಟು ಕುಟುಂಬದ ಆಸ್ತಿಗಳಿಗೆ ಖಾತೆ ನನ್ನ ತಂದೆಯ ಹಸೆರಿಗೆ ಆಗಿದ್ದರು ಸಹ ನಾನು ಸುಳ್ಳು ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ಹಾಗೆಯೇ ದಾವಾ ಆಸ್ತಿಗಳು ಸಹ ನನ್ನ ತಂದೆಯ ಹಸೆರಿನಲ್ಲಿ ಇದ್ದವು ಎಂದರೆ ಸರಿಯಲ್ಲ.

ಸರ್ವೆ ನಂಬರ್ 207 ರಲ್ಲಿ ನಿಮ್ಮ ಒಟ್ಟು ಕುಟುಂಬದ ಆಸ್ತಿ ಎಷ್ಟು ಇತ್ತು ಎಂದರೆ ಸಾಕ್ಷಿ 6 ಎಕರೆ 4 1/2 ಗುಂಟೆ ಇತ್ತು ಎಂದು ನುಡಿಯುತ್ತಾರೆ. ಸರ್ವೆ ನಂಬರ್ 207 ರಲ್ಲಿ 6 ಎಕರೆ 4 ಗುಂಟೆಯಲ್ಲಿ 4 ಎಕರೆ ಜಮೀನನ್ನು ನಿಮ್ಮ ತಂದೆ ಚನ್ನೇಗೌಡ, ಮತ್ತು ಚಿಕ್ಕಪ್ಪಂದಿರು ಎಲ್ಲರು ಸೇರಿ ಸರ್ಕಾರಿ ಅಸ್ಪತ್ರೆಗೆ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ

ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ಕಾರಿ ಆಸ್ಪತ್ರೆಗೆ ಸರ್ವೆ ನಂಬರ್ 207 ರಲ್ಲಿರುವ 4 ಎಕರೆ ಸರಿ ಹೊಂದುವುದಿಲ್ಲ ಎಂದು ಹೇಳಿ ಅದೇ ಗ್ರಾಮದ ಕೆಂಪಮ್ಮ ಗಂಡ ಠಾಣಯ್ಯರವರಿಂದ ಸರ್ವೆ ನಂಬರ್ 208/4 ರಲ್ಲಿ 1 ಎಕರೆ 4 ಗುಂಟೆಯನ್ನು ನಾವು ಪಡೆದು ವರ್ಗಾವರ್ಗಿ ದಾಖಲೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅ ದಾಖಲೆಯನ್ನು ವಾದಿಗಳು ನ್ಯಾಯಾಲಯಕ್ಕೆ ಹಾಜರುಪಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

ಸರ್ವೆ ನಂಬರ್ 206/1 ರಲ್ಲಿ1 ಎಕರೆ ಯನ್ನು ಕಾಡಮ್ಮರರಿಂದ ಪಡೆದುಕೊಂಡು ನಾವು 1 ಎಕರೆಯನ್ನುಅ ವರಿಗೆ ನೀಡಿ ಪರಿವರ್ತನೆ ಮೂಲಕ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ಪರಿವರ್ತನೆ ದಾಖಲೆ ನೊಂದಾವಣಿ ಗೊಡಿದೆ ಎಂದರೆ ಸರಿಯಲ್ಲ. ಮತ್ತೇ ಕೆಂಪಮ್ಮನವರಿಂದ ಕೂಡ ಜಮೀನನ್ನು ಪಡೆದು ಅಷ್ಟೇ ಜಮೀನನ್ನು ನಾವು ಕೊಟ್ಟು ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

ಸರ್ವೆ ನಂಬರ್ 207 ರಲ್ಲಿ ಆಸ್ಪತ್ರೆಗೆ 4 ಎಕರೆ ಕೊಟ್ಟ ನಂತರ 2 ಎಕರೆ 4 ಗುಂಟೆ ನಮಗೆ ಉಳಿದಿತ್ತು ಎಂದರೆ ಸರಿಯಲ್ಲ. ಅದರಲ್ಲಿ 1 ಎಕರೆ ನನ್ನ ತಾತನ ಅಣ್ಣ ಚನ್ನೇಗೌಡನಿಗೆ ಹೋಗಿರುತ್ತದೆ ಮತ್ತು ಉಳಿದ 1 ಎಕರೆ 4 ಗುಂಟೆ ವಾದಿ ಮತ್ತು ನಮ್ಮ ಒಟ್ಟು ಕುಟುಂಬಕ್ಕೆ ಸೇರಿತು ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

ಒಟ್ಟು ಕುಟುಂಬದ ಆಸ್ತಿ ವಿಬಾಗ ಅದ ನಂತರ ನನ್ನ ತಂದೆ ಮತ್ತು ಸಹೋದರರು ಆಸ್ಪತ್ರೆಗೆ ದಾನ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ನಾವು ಮತ್ತು ವಾದಿ ಈಗಲೂ ಕೂಡ ದಾವಾ ಆಸ್ತಿಯ ಜಂಟಿ ಸ್ವಾದೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಮತ್ತು

ವಾದಿಗಳ ನಡುವೆ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾದರೆ ನಿಮ್ಮ ಪ್ರಕಾರ ವಿಭಾಗ ವಾಗಿದಲ್ಲಿ ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ನನ್ನ ತಂದೆಯ ಭಾಗಕ್ಕೆ ಬಂದಿರು ದಾಖಲೆಯನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಹಸೆರಿನಲ್ಲಿರುವ ದಾಖಲಾತಿ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.

ನನ್ನ ತಂದೆಯ ಹಸೆರಿಗೆ ಇರುವ ದಾಖಲೆಯನ್ನು ದುರುಪಯೋಗ ಪಡಿಸಿಕೊಂಡು ನನ್ನ ತಾಯಿಯ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ಮತ್ತು 5 ನೇ ಪ್ರತಿವಾದಿ ನಮ್ಮ ತಾಯಿ ಹಸೆರಿನಿಂದ ಖಾತಾ ವರ್ಗಾವಣೆ ಮಾಡಿಸಿಕೊಳ್ಳಲು ತಹಸಿಲ್ದಾರರ ಕಛೇರಿಗೆ ಆರ್ಜಿ ನೀಡಿರುತ್ತೇವೆ ಎಂದರೆ ಸರಿ. ಅದಕ್ಕೆ ವಾದಿ 4 ರಿಂದ 6 ರವರು, 11,15,16 ಮತ್ತು 19 ರವರು ತಕರಾರು ಸಲ್ಲಿಸಿದ್ದರು ಎಂದರೆ ನನಗ ಗೊತ್ತಿಲ್ಲ. ಆದ ಕಾರಣ ಆ ಆರ್ಜಿಯನ್ನು ತಕರಾರು ಆರ್ಜಿ ಎಂದು ಪರಿಗಣಿಸಿ ವಿಲೆಗೆ ಬಾಕಿ ಇಟ್ಟರು ಎಂದರೆ ಸರಿ.

ನಿಮ್ಮತಾಯಿಯ ಹಸೆರಿಗೆ ಆಗಿರುವ ಖಾತೆಯನ್ನು ವಾದಿಗಳು ಎ ಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಾರೆ ಎಂದರೆ ಸರಿ. ಅದ ಕಾರಣ ಎ ಸಿ ರವರು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ನಿರ್ದೇಶನ ನೀಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಬಾಕಿ ಇದೆ ಎಂದು ನುಡಿಯುತ್ತಾರೆ. ಈ ವಿಚಾರ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

ತಹಸಿಲ್ದಾರರ ಕಛೇರಿಯಲ್ಲಿ ತಕರಾರು ಸಲ್ಲಿಸಿದ ನಂತರ ವಾದಿಗಳು ಪ್ರತಿವಾದಿಗಳನ್ನು ದಾವಾ ಸ್ವತ್ತಿನಲ್ಲಿ ಭಾಗ ಕೇಳಿ ಪಂಚಾಯ್ತಿ ನಡೆಸಿದರು ಎಂದರೆ ಸರಿಯಲ್ಲ. ಅ ಪಂಚಾಯ್ತಿಯಲ್ಲಿ ಪಂಚಾಯ್ತಿದಾರರಿಗೆ ಬೆಲೆ ನೀಡಿರುವುದಿಲ್ಲ ಎಂದರೆ ಸುಳ್ಳು. ಅ ಕಾರಣದಿಂದ ವಾದಿಗಳು ಈ ದಾವೆ ಸಲ್ಲಿಸಿದರು ಎಂದರೆ ಸುಳ್ಳು.

ನಿಪಿ-2 ನಿಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ಕಾಡಮ್ಮನವರಿಗೆ ಮಾಡಿಕೊಟ್ಟ ಪರಿವರ್ತನಾ ಪತ್ರ ಆಗಿರುತ್ತದೆ ಎಂದರೇ ಸಾಕ್ಷಿ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

ಅದೇ ರೀತಿ ನಿಪಿ-3 ಅನ್ನು ನಿಮ್ಮ ತಂದೆ ಮತ್ತು ಚಿಕ್ಕಪ್ಪಂದಿರು ಕೆಂಪ್ಪಮ್ಮವರಿಗೆ ಮಾಡಿಕೊಟ್ಟ ಪರಿವರ್ತನಾ ಪತ್ರ ಆಗಿರುತ್ತದೆ ಎಂದರ ಸುಳ್ಳು. ಈ ವಿಚಾರ ಗೊತ್ತಿದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

ನಿಪಿ-3ರ ಚೆಕ್ಕು ಬಂದಿಯಲ್ಲಿ ಪೂರ್ವಕ್ಕೆ ನಾವುಗಳು ನಮ್ಮ ಸ್ವಂತಕ್ಕಾಗಿ ಉಳಿಸಿಕೊಂಡಿರುವ ಜಮೀನು ಎಂದು ನಿಮ್ಮ ತಂದೆ ಮತ್ತು ಚಪ್ಪಂದಿರು ನಮೂದಿಸಿರುತಾತರೆ ಎಂದರೆ ಸುಳ್ಳು. ಈ ಪೂರ್ವಕ್ಕೆ ಉಳಿಸಿಕೊಂಡಿರುವ ಬಗ್ಗೆ ಬರೆಯಲಾಗಿರುವ ವಿಚಾರವೇ ದಾವಾ ಸ್ವತ್ತು ಎಂದರೆ ಸುಳ್ಳು. ವಾದಿಗಳಿಗೇ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**